
SERVICE ABOVE SELF



Rotary
विश्वमित्रः
# ವಿಶ್ವಮಿತ್ರ
VISHWAMITHRA
Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25
Rtn. Stephanie A. Urchick
RI President 2024-25

| Rtn. CA Dev Anand | Rtn. K. Sooryanarayana Udpa | Rtn. N.G. Usha | Rtn. M. Madhavachar |
| --- | --- | --- | --- |
| District Governor 2024-25 | President, Mob: 99009 66114 | Secretary, Mob : 81975 92278 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –02 ದಿನಾಂಕ : 17–7–2024


## ದಿನಾಂಕ: 17.7.2024 ರ ವಾರದ ಸಭೆಯ ವರದಿ

**ದಿನಾಂಕ: 17.07.2024 ರಂದು ನಮ್ಮ ಕ್ಲಬ್‌ನ ಈ ಸಾಲಿನ ಎರಡನೇ ಸಭೆ.ಇದು ಕ್ಲಬ್ ಅಫೇರ್ಸ್ ಸಭೆಯಾಗಿದ್ದು, 2024–25 ನೇ ಸಾಲಿನ ರೋಟರಿ ಬಜೆಟ್ ಮಂಡಿಸಲಾಯಿತು. ವೇದಿಕೆಯಲ್ಲಿ ಖಜಾಂಚಿ ರೊ.ಎಸ್.ಜಿ.ಗೋಪಾಲ್, ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪ, ಕಾರ್ಯದರ್ಶಿ ರೊ. ಎನ್.ಜಿ. ಉಷಾರವರು ಉಪಸ್ಥಿತರಿದ್ದು ಸಭೆ ಯಶಸ್ವಿಯಾಗಿ ನಡೆಯಿತು.**



ಆರಂಭದಲ್ಲಿ ರೊ.ಗಾಯತ್ರಿ ಸುಮತೀಂದ್ರರವರು "ನಾರಾಯಣ ನಿನ್ನ ನಾಮ ಸ್ಮರಣೆ" ಎಂಬ ಸುಶ್ರಾವ್ಯ ಗಾಯನದೊಂದಿಗೆ ಪ್ರಾರ್ಥನೆ ಮಾಡಿದರು. ರೊ. ಪೇಟೆ ಅಜಯ ಕುಮಾರ್‌ರವರು ಸರ್ವರನ್ನು ಸ್ವಾಗತಿಸಿದರು. ರೊ. ವೈ.ಗೋಪಾಲಕೃಷ್ಣ ಗುಪ್ತರವರು ರೋಟರಿ ಮಾಹಿತಿ ನೀಡಿದರು. (ವಿವರ ಬೇರೆ ಕಾಲಂ ನಲ್ಲಿದೆ) ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಪ್ರಕಟಣೆ ನೀಡಿದರು.

ಅಧ್ಯಕ್ಷರಾದ ರೊ.ಕೆ. ಸೂರ್ಯನಾರಾಯಣ ಉಡುಪರವರು ಮಾತನಾಡಿ, ಇಂದು 2024–25 ನೇ ಸಾಲಿನ ರೋಟರಿ ಬಜೆಟ್ ಮಂಡನೆ ಮತ್ತು ಈ ಸಾಲಿನಲ್ಲಿ ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳು, ಚರ್ಚೆ ಸಲಹೆ ಸೂಚನೆಗಳನ್ನು ನೀಡಬಹುದು ಎಂದು ತಿಳಿಸುತ್ತಾ, ಈ ಸಾಲಿನ ಬಜೆಟ್ ಇದು ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನವಾಗಿ ಇಂದು ಮಂಡನೆಯಾಗುತ್ತಿದೆ. ಆದುದರಿಂದ ಸದಸ್ಯರುಗಳು ಪರಾಮರ್ಶಿಸಿ ತಮ್ಮ ಅಭಿಪ್ರಾಯಗಳನ್ನು ತಿಳಿಸಬಹುದಾಗಿದೆ ಎಂದರು. ಈ ಸಾಲಿನ ಖಜಾಂಚಿ ರೊ.ಎಸ್.ಜಿ. ಗೋಪಾಲ್‌ರವರು ರೂ.19,20,000.00 ರೂಗಳನ್ನೊಳಗೊಂಡ ಖರ್ಚು ವೆಚ್ಚಗಳನ್ನೊಳಗೊಂಡ ಬಜೆಟ್ ಮಂಡಿಸಿದರು. ಈಗಾಗಲೇ 28 ಜನ ಸದಸ್ಯರುಗಳಿಂದ ಪೂರ್ಣ ಪ್ರಮಾಣದ ಶುಲ್ಕ, 9 ಜನ 8,000.00 ಹಾಗೂ 3 ಜನ ನೂತನ ಸದಸ್ಯರುಗಳಿಂದ ಶುಲ್ಕ ಬಂದಿರುವುದರ ಬಗ್ಗೆ ವಿವರ ತಿಳಿಸಿದರು.



ರೊ. ಡಿ.ಎಸ್. ನಟರಾಜ್‌ರವರು ಬಜೆಟ್‌ನ್ನು ಓದಲು ತಿಳಿಸಿದರು.ಅಲ್ಲದೇ ಸಿ.ಓ.ಎಲ್ ಎಂಬುದೇನೆಂಬುದರ ಬಗ್ಗೆ ವಿವರ ನೀಡಿದರು. ಕೆಲವೊಂದು ವಿವರಗಳನ್ನು ನೀಡಿದ ನಂತರ ಸಭೆ ಸರ್ವಾನುಮತದಿಂದ ಬಜೆಟ್‌ಗೆ ಸಭೆ ಒಪ್ಪಿಗೆ ನೀಡಿತು.

ರೋಟರಿ ಜಿಲ್ಲೆ 3182ರ ಈ ಸಾಲಿನ ಸದಸ್ಯತ್ವ ವಿಸ್ತರಣೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷರಾದ ರೊ. ವೀರಣ್ಣ ಎ. ಹುಗ್ಗಿಯವರು ಮಾತನಾಡಿ ಶಿವಮೊಗ್ಗದಲ್ಲಿ ಮುಂದಿನ ತಿಂಗಳು ನಡೆಯಲಿರುವ ಸಮಾವೇಶಕ್ಕೆ ದಂಪತಿ ರೋಟರಿಯನ್ನರಿಗೆ ರೂ.3400.00 ನೋಂದಣಿ ಶುಲ್ಕ ಆಗುತ್ತದೆ. ಒಟ್ಟು 5 ಜನ ಒಟ್ಟಿಗೆ ನೋಂದಣಿ ಮಾಡಿದರೆ ರೂ.500.00 ರಿಯಾಯಿತಿ ಇರುವುದಾಗಿ ತಿಳಿಸಿದರು.

ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರವರು ಮಾತನಾಡಿ, ಈ ಬಾರಿ ರೋಟರಿ ಜಿಲ್ಲಾ ಗವರ್ನರ್‌ರವರು ಶೇ50% ಹೆಚ್ಚುವರಿ ಸದಸ್ಯತ್ವವನ್ನು ಮಾಡಬೇಕೆಂದು ತಿಳಿಸಿರುತ್ತಾರೆ. ಆದುದರಿಂದ ತಮ್ಮಲ್ಲಿ ಮನವಿ ಮಾಡುವುದೆಂದರೆ ಓರ್ವ ರೊಟೇರಿಯನ್ ಒಬ್ಬ ನೂತನ ಸದಸ್ಯರನ್ನು ಕರೆತರಬೇಕೆಂದು ಕೋರಿದರು. ಮುಂದಿನ ತಿಂಗಳು ನೂತನ ಸದಸ್ಯರಿಗೆ ಓರಿಯೆಂಟೇಶನ್ ಕೋರ್ಸು ಒಂದನ್ನು ವ್ಯವಸ್ಥೆ ಮಾಡುವುದಾಗಿ ಅಧ್ಯಕ್ಷರು ತಿಳಿಸಿದರು.

ರೊ.ಟಿ.ಕೆ.ಎಂ. ಭಟ್‌ರವರು ಟಾಕ್‌ಆಫ್ ದಿ ಡೇಕಾರ್ಯಕ್ರಮದಲ್ಲಿ ಮಾತನಾಡಿ, ನೈಜ ರೊಟೇರಿಯನ್ನರು ಯಾರು ಎಂಬುದನ್ನು ತಿಳಿಸುತ್ತಾ, * ಶೇ 100 ರಷ್ಟು ಹಾಜರಾತಿ ನೀಡುವವರು. * ಸಭೆಗೆ ಬಂದು

2ನೇ ಪುಟಕ್ಕೆ



## ಈ ವಾರದ ಸಭೆ

**ದಿನಾಂಕ : 24–07–2024 ಬುಧವಾರ** **ಸಂಜೆ 6:45**

ಮುಖ್ಯ ಅತಿಥಿಗಳು: **ಡಾ. ಶೂನ್ಯ ಸಂಪದ್**
ಫಿಜಿಷಿಯನ್, ಸರ್ಜಿ ಆಸ್ಪತ್ರೆ, ಶಿವಮೊಗ್ಗ
ವಿಷಯ: **"ಆರೋಗ್ಯ ರಕ್ಷಣೆ"**

**ದಯಮಾಡಿ ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ.**

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ

ಶೇ60% ಸಭೆಯಲ್ಲಿ ಭಾಗವಹಿಸುವವರು.* ಸದಸ್ಯತ್ವ ಶುಲ್ಕ ನೀಡುವವರು. * ರೋಟರಿ ವಹಿಸಿದ ಕಾರ್ಯಗಳನ್ನು ಮಾಡುವವರು ಎಂದರು.

ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಮಾತನಾಡಿ, ಮುಂದಿನ ದಿನಗಳಲ್ಲಿ ಕಾಲೇಜು ವಿದ್ಯಾರ್ಥಿಗಳು ಮತ್ತು ಶಿವಮೊಗ್ಗೆಯ ಸಮುದಾಯದಿಂದ ಕೆಲವರನ್ನು ಆಯ್ಕೆ ಮಾಡಿಕೊಂಡು ಆರ್.ಸಿ.ಸಿ. ಪ್ರಾರಂಭಿಸುವ ಯೋಜನೆ ಇರುತ್ತದೆ ಎಂದರು.

ರೊ.ಎನ್.ಎಸ್. ಶ್ರೀಧರ್‌ರವರು ಮಾತನಾಡಿ, ಮಾಜಿ ಅಧ್ಯಕ್ಷರುಗಳ ಹೆಸರುಗಳು ಮತ್ತು ಕಾರ್ಯದರ್ಶಿಗಳ ವಿವರಗಳುಳ್ಳ ಫಲಕವನ್ನು ಸಭಾಂಗಣದಲ್ಲಿ ಹಾಕುವುದರ ಬಗ್ಗೆ ಸಲಹಿಸಿದರು. ರೊ.ಎಸ್. ಜಿ. ಗೋಪಾಲ್‌ರವರು ಬಜೆಟ್‌ಗೆ ಎಲ್ಲರ ಒಪ್ಪಿಗೆ ಇದೆಯೆಂದು ಭಾವಿಸುವೆ ಎಂದರು. ಸಭೆ ಒಪ್ಪಿಗೆ ನೀಡಿತು.

ಕೊನೆಯಲ್ಲಿ ರೊ.ಎಸ್. ಮಂಜುನಾಥ್‌ರವರು ವಂದನಾರ್ಪಣೆ ಮಾಡಿದರು. ರಾಷ್ಟ್ರಗೀತೆಯ ನಂತರ ಸಭೆ ಮುಕ್ತಾಯವಾಯಿತು.






ದಿನಾಂಕ: 14-07-2024ರಂದು ಚೆನ್ನಗಿರಿ ತಾಲ್ಲೂಕಿನ ನಲ್ಲೂರಿನಲ್ಲಿ ರೋಟರಿ ಸಮುದಾಯ ದಳದ ಪದವೀ ಸ್ವೀಕಾರ ಸಮಾರಂಭ ನಡೆಯಿತು. ರೋಟರಿ ಕ್ಲಬ್‌ನ ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪರವರು ಪದಗ್ರಹಣ ಅಧಿಕಾರಿಯಾಗಿ ಆಗಮಿಸಿದ್ದರು. ಕಾರ್ಯದರ್ಶಿ ರೊ. ಎನ್.ಜಿ. ಉಷಾ ಹಾಗೂ ನಿಯೋಜಿತ ಅಧ್ಯಕ್ಷರಾದ ರೊ. ಆರ್. ಆನಂದರವರು ಹಾಗೂ ರೊ. ಅಜಯ್ ಕುಮಾರ್, ರೊ, ಗೋಪಾಲಕೃಷ್ಣ ಗುಪ್ತರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಆಯೋಜಿಸಿದ್ದರು.

## *ROTARY CLUB SHIMOGA*

### *Fee structure for the year 2024-25*

| *Particulars* | *Amount* |
|---|---|
| *Percapita dues 78.5 $ * 85 Rs* | *6673.00* |
| *GST 18%* | *1201.00* |
| *COL 1$ * 85* | *85.00* |
| *GST 18%* | *15.00* |
| *District Fund* | *500.00* |
| *Rotary News Magazine* | *480.00* |
| *Club Fee* | *2850.00* |
| *Tea/Breakfast* | *2227.00* |
| *Weekly Bulletin* | *644.00* |
| *Ashakirana* | *200.00* |
| *Rotary Youth Centre* | *500.00* |
| *Pulse Polio* | *85.00* |
| *TRF Contribution* | *500.00* |
| | *16000.00* |

| | | |
|---|---|---|
| 01 | For Members Annual Fees | 16000.00 |
| 02 | For New Members (inclusive of Rs.1,000.00 for admission fees and Rs.1,000.00 for TRF ) | 18000.00 |
| 03 | For Spouse Rotarians | 8, 000.00 |

### *Details of Fee for Spouse Rotarians*

| | |
|---|---|
| R.I. Percapita Dues 78.50 x 85 | 6673.00 |
| GST 18% | 1201.00 |
| COL US$ 1 x 85 | 85.00 |
| GST 18% | 15.00 |

### ವಿಶೇಷ ಪ್ರಕಟಣೆ

ದಯಮಾಡಿ ಸದಸ್ಯರು 2024-25 ನೇ ಸಾಲಿನ ತಮ್ಮ ಸದಸ್ಯತ್ವ ಶುಲ್ಕವನ್ನು ಪಾವತಿ ಮಾಡಬೇಕಾಗಿ ವಿನಂತಿ.

–ರೊ. ಕೆ. ಸೂರ್ಯನಾರಾಯಣ ಉಡುಪ
ಅಧ್ಯಕ್ಷರು – 2024-25

### ಗಮನಿಸಿ

ದಿನಾಂಕ: 31-07-2024 ಬುಧವಾರ, ರೋಟರಿ ಸಭಾ ಭವನದಲ್ಲಿ ಪ್ರಥಮ ರೋಟರಿ ಕೌಟುಂಬಿಕ ಸ್ನೇಹಮಿಲನ ಕಾರ್ಯಕ್ರಮವನ್ನು ರೋಟರಿ ಸದಸ್ಯರ ಹಾಗೂ ಅವರ ಕುಟುಂಬದವರ ಪ್ರತಿಭೆಯನ್ನು ಅನಾವರಣ ಗೊಳಿಸುವುದರ ಮೂಲಕ ಗೌರವಿಸಲು ಮೀಸಲಿಡಲಾಗಿದೆ. ಎಲ್ಲಾ ಸದಸ್ಯರು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಲು ಕೋರಲಾಗಿದೆ.

1) ಪರಿಸರ ಗೀತೆ ಕನ್ನಡದಲ್ಲಿ ಒಬ್ಬರಿಗೆ 5 ನಿಮಿಷ ಒಟ್ಟು 6 ಸದಸ್ಯರಿಗೆ ಮಾತ್ರ ಅವಕಾಶ
2) ಪರಿಸರ ಕಾಳಜಿ – ರೋಟರಿ ಸದಸ್ಯರು ವೈಯಕ್ತಿಕವಾಗಿ ಕೈಗೊಂಡ ಕ್ರಮಗಳ ಬಗ್ಗೆ ಸಭೆಗೆ ಮಾಹಿತಿ. ಪ್ರತಿಯೊಬ್ಬ ಸದಸ್ಯರಿಗೆ 3 ನಿಮಿಷದಂತೆ 5 ಸದಸ್ಯರಿಗೆ ಅವಕಾಶ.

ತಮ್ಮ ಹೆಸರುಗಳನ್ನು ನೋಂದಾಯಿಸಿ : ರೊ. ಎನ್.ಜಿ. ಉಷಾ, ಕಾರ್ಯದರ್ಶಿ, 81975 92278, ರೊ. ಎನ್.ವಿ. ಭಟ್, ಛೇರ್ಮನ್ ಪ್ರೋಗ್ರಾಂ ಕಮಿಟಿ – 94481 71923.

ಮೊದಲು ಹೆಸರು ನೋಂದಾಯಿಸಿದವರಿಗೆ ಆದ್ಯತೆ ನೀಡಲಾಗುವುದು.

**ನೀವು ಅತ್ಯುತ್ತಮ ರೋಟರಿ ಸದಸ್ಯರೆಂದಾದರೆ ಪ್ರತಿ ವಾರದ ಸಭೆಗೆ ತಪ್ಪದೇ ಬನ್ನಿ**

## ಸಂಪಾದಕೀಯ



### ಸೂಜಿ – ಕತ್ತರಿಯ ಸಂದೇಶ

ಬಟ್ಟೆ ಹೊಲಿಯುವವರ ಬಳಿ ಅತಿ ಮುಖ್ಯವಾದ ಎರಡು ಉಪಕರಣಗಳಿರಲೇಬೇಕು. ಒಂದು ಸೂಜಿ ಇನ್ನೊಂದು ಕತ್ತರಿ.

ಇವೆರಡೂ ಜೊತೆಯಲ್ಲೇ ಇರುವುದಾದರೂ ಇವೆರಡರ ಸ್ವಭಾವ ಮಾತ್ರ ವಿರುದ್ಧ. ಕತ್ತರಿ ಬಟ್ಟೆಯನ್ನು ಕತ್ತರಿಸಿ ತುಂಡು ತುಂಡು ಮಾಡುತ್ತದೆ. ಆದರೆ ಸೂಜಿ ಆ ತುಂಡುಗಳನ್ನು ಜೋಡಿಸಿ ಒಂದುಗೂಡಿಸುತ್ತದೆ.

ಕತ್ತರಿಗೆ ಹೋಲಿಸಿದರೆ ಸೂಜಿ ಅತಿ ಚಿಕ್ಕ ವಸ್ತು. ಸಾಮಾಜಿಕವಾಗಿ ಇದರಿಂದ ಒಂದು ನೀತಿ ಸಿಕ್ಕುತ್ತದೆ.

ಕೆಲವರು ಕತ್ತರಿಯಂತೆ ತಮಗೆ ಬೇಡವಾದುದನ್ನು ಕತ್ತರಿಸಿ ವಿಭಜಿಸುತ್ತಾರೆ. ಅದು ಸಮಾಜವಾಗಬಹುದು. ಸಂಸ್ಥೆಯಾಗಬಹುದು. ಸಂಸಾರವೇ ಆಗಬಹುದು. ಸ್ನೇಹವೂ ಆಗಬಹುದು. ಕತ್ತರಿಯ ಹರಿತಕ್ಕೆ ಒಳಗಾದವರು ದುಃಖಿಸುತ್ತಲೇ ಮತ್ತೆ ಮತ್ತೆ ತುಂಡಾಗುತ್ತಲೇ ಇರುತ್ತಾರೆ.

ಆದರೆ ಸೂಜಿ ಚಿಕ್ಕದಾದರೂ, ಕೆಲಸ ನಿಧಾನವಾದರೂ, ತುಂಡಾದುದನ್ನು ಹೊಲಿದು ಜೋಡಿಸುವಂತೆ ಸಜ್ಜನರು ವಿಭಜಿತರನ್ನು ಒಂದುಗೂಡಿಸಲು ಪ್ರಯತ್ನಿಸುತ್ತಲೇ ಇರುತ್ತಾರೆ.

ಈ ಸಂದೇಶವನ್ನು ನಾವು ಮಾದರಿಯಾಗಿಟ್ಟುಕೊಂಡು ರೋಟರಿಯಲ್ಲಿ ಹಳೆಯ ಸದಸ್ಯರನ್ನು ದೂರವಾಗದಂತೆ ತಡೆದು ವಿಶ್ವಾಸದಿಂದ ಮಾತಾಡಿಸಿ ರೋಟರಿ ಸೇವೆಗಳಲ್ಲಿ ತೊಡಗಿಸಿಕೊಳ್ಳೋಣ. ಅಂತೆಯೇ 'ಹಳೆ ಬೇರು–ಹೊಸ ಚಿಗುರು ಕೂಡಿರಲು ಮರ ಸೊಬಗು', ಎನ್ನುವಂತೆ ಹೊಸ ಸದಸ್ಯರು ಈ ವರ್ಷ ಹೊಸದಾಗಿ ಸೇರ್ಪಡೆಯಾಗಿದ್ದು ಅವರಿಗೆ ರೋಟರಿಯ ರೀತಿ–ನೀತಿಗಳ ಬಗ್ಗೆ ತರಬೇತಿ ನೀಡಿ, ವಾರದ ಸಭೆಗಳಲ್ಲಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ನೋಡಿಕೊಂಡು ಕ್ರಿಯಾಶೀಲರನ್ನಾಗಿಸೋಣ. ಅವರ ಸೇವೆ ರೋಟರಿಗೆ ಸಲ್ಲುವಂತಾಗಿಸೋಣ. ಇದು ಪ್ರತಿಯೊಬ್ಬ ಕ್ರಿಯಾಶೀಲ ರೋಟರಿ ಸದಸ್ಯರ ಕರ್ತವ್ಯ.

ಈ ರೀತಿ ನಾವು ಕತ್ತರಿಯಂತಾಗದೇ ತುಂಡಾದ ಬಟ್ಟೆ ಜೋಡಿಸುವ ಸೂಜಿ–ದಾರದಂತಾಗೋಣ ಎಂಬ ಸದಾಶಯದೊಂದಿಗೆ...

■ **ರೊ. ಎಂ. ಮಾಧವಾಚಾರ್**

**ನಾವು ಯೋಚಿಸುವ, ಹೇಳುವ ಅಥವಾ ಮಾಡುವ ಸಂಗತಿಗಳ ಚತುರ್ವಿಧ ಪರೀಕ್ಷೆ**

1. ಇದು **ಸತ್ಯವೇ?**
2. ಇದು ಸಂಬಂಧಪಟ್ಟ ಎಲ್ಲರಿಗೂ **ಸನ್ಯಾಯಸಮ್ಮತವೇ?**
3. ಇದು **ಸೌಹಾರ್ದತೆ** ಮತ್ತು **ಉತ್ತಮ ಸ್ನೇಹವನ್ನು** ನಿರ್ಮಿಸುತ್ತದೆಯೇ ?
4. ಇದು ಸಂಬಂಧಪಟ್ಟ ಎಲ್ಲರಿಗೂ **ಅನುಕೂಲಕರವೇ?**

### Happy Birthday Wishes



*Dr. Shivakumar (HPC)*
*19th July*



*Rtn. Manjunath D L*
*21st July*



*Rtn. Dr. Yatheesh*
*24th July*

## ಡಿಜಿ ಟಿಪ್ಸ್ – 2 ಜಿ, 4 ಜಿ, 5 ಜಿ

1 ಜಿ ಎಂದರೆ ಗ್ರಾಹಕರಿಗೆ ಮೂಲ ಧ್ವನಿ ಸೇವೆಗಳನ್ನು ಒದಗಿಸಲು ನಿರ್ಮಿಸುಲಾದ ಮೊದಲ ತಲೆಮಾರಿನ ಮೊಬೈಲ್ ನೆಟ್‌ವರ್ಕ್‌ಗಳು. 1 ಜಿ ನೆಟ್‌ವರ್ಕ್‌ಗಳು 1980ರ ದಶಕದಲ್ಲಿ ಪ್ರಾರಂಭವಾದವು ಮತ್ತು ವಿವಿಧ ಅನಲಾಗ್ ತಂತ್ರಜ್ಞಾನಗಳ ಮೂಲಕ ವಿಶ್ವದ ವಿವಿಧ ಭಾಗಗಳಲ್ಲಿ ಪರಿಚಯಿಸಲ್ಪಟ್ಟವು.

2 ಜಿ ಎಂದರೆ ಹಿಂದಿನ 1 ಜಿ ನೆಟ್‌ವರ್ಕ್‌ಗಳನ್ನು ಬದಲಾಯಿಸಿದ ಎರಡನೇ ತಲೆಮಾರಿನ ಮೊಬೈಲ್ ನೆಟ್‌ವರ್ಕ್‌ಗಳನ್ನು ಸೂಚಿಸುತ್ತದೆ. ಈ ನೆಟ್‌ವರ್ಕ್‌ಗಳು ಹೆಚ್ಚು ಸುರಕ್ಷಿತ ಧ್ವನಿ ಮತ್ತು ಪಠ್ಯ ಸಂದೇಶ ಸೇವೆಗಳು ಮತ್ತು ಸೀಮಿತ ಡೇಟಾ ಸೇವೆಗಳನ್ನು ಸಕ್ರಿಯಗೊಳಿಸಿದವು. 2 ಜಿ. ನೆಟ್‌ವರ್ಕ್‌ಗಳು 1990ರ ದಶಕದಲ್ಲಿ ಪ್ರಾರಂಭವಾದವು ಮತ್ತು ವಿವಿಧ ಡಿಜಿಟಲ್ ತಂತ್ರಜ್ಞಾನಗಳ ಮೂಲಕ ವಿಶ್ವದ ವಿವಿಧ ಭಾಗಗಳಲ್ಲಿ ನಿಯೋಜಿಸಲ್ಪಟ್ಟವು. ಎರಡನೇ ತಲೆಮಾರಿನ ಮೊಬೈಲ್ ನೆಟ್‌ವರ್ಕ್‌ಗಳಿಗೆ ಹೆಚ್ಚು ವ್ಯಾಪಕವಾಗಿ ಬಳಸಲಾಗುವ ತಂತ್ರಜ್ಞಾನ ಮಾನದಂಡವೆಂದರೆ 'ಗ್ಲೋಬಲ್ ಸಿಸ್ಟಮ್ ಫಾರ್ ಮೊಬೈಲ್ ಕಮ್ಯುನಿಕೇಷನ್' (ಜಿಎಸ್‌ಎಂ). ಡಿಜಿಟಲ್ ಅಡ್ವಾನ್ಸ್ ಮೊಬೈಲ್ ಫೋನ್ ಸಿಸ್ಟಮ್ (ಡಿ–ಎಎಂಪಿಎಸ್) ಮತ್ತು ಮಧ್ಯಂತರ ಸ್ಟ್ಯಾಂಡರ್ಡ್ 95 (ಐಎಸ್–95) ಎರಡನೆಯ ತಲೆಮಾರಿನ ಮೊಬೈಲ್ ನೆಟ್‌ವರ್ಕ್‌ಗಳನ್ನು (2ಜಿ) ಪ್ರಾರಂಭಿಸಲು ಬಳಸಿದ ಇತರ ತಂತ್ರಜ್ಞಾನಗಳಾಗಿವೆ. ಧ್ವನಿ ಕರೆ ಮತ್ತು ಪಠ್ಯ ದಂದೇಶ ಕಳುಹಿಸುವಿಕೆಯು 2 ಜಿ ನೆಟ್‌ವರ್ಕ್‌ಗಳ ಪ್ರಮುಖ ಸೇವೆಗಳಾಗಿವೆ. ಇಂದಿಗೂ ನೀವು ಕರೆಗಳನ್ನು ಮತ್ತು ಪಠ್ಯ ಸಂದೇಶಗಳನ್ನು ಸ್ವೀಕರಿಸಲು ಮಾತ್ರ ಫೋನ್ ಬಳಸುತ್ತಿದ್ದಲ್ಲಿ ಈಗಲೂ 2 ಜಿ. ತಂತ್ರಜ್ಞಾನವನ್ನು ಬಳಸುತ್ತಿರುತ್ತೀರಿ.

ಮೊಬೈಲ್ ಸೇವೆಗಳಲ್ಲಿ 3 ಜಿ ಮೂರನೇ ತಲೆಮಾರಿನ ಮೊಬೈಲ್ ಸಿಡಿಎಂಎ ತಂತ್ರಜ್ಞಾನವನ್ನು ಆಧರಿಸಿವೆ. ಮೊದಲ ಟ್ರ್ಯಾಕ್ ಯುನಿವರ್ಸಲ್ ಮೊಬೈಲ್ ಟೆಲಿಕಮ್ಯುನಿಕೇಶನ್ಸ್ ಸಿಸ್ಟಮ್ಸ್ (ಯುಎಂಟಿಎಸ್) ಮತ್ತು ಇನ್ನೊಂದು ಸಿಡಿಎಂಎ 2000. 3 ಜಿ ತಂತ್ರಜ್ಞಾನದಲ್ಲಿ ಗರಿಷ್ಠ 2 ಎಮ್‌ಬಿಪಿಎಸ್‌ವರೆಗೆ ಡೌನ್‌ಲಿಂಕ್ ವೇಗವನ್ನು ನೀಡುತ್ತದೆ.

4 ಜಿ ಎಂದರೆ ನಾಲ್ಕನೇ ತಲೆಮಾರಿನ ಮೊಬೈಲ್ ನೆಟ್‌ವರ್ಕ್‌ಗಳು. 2010ರಲ್ಲಿ ಮೊದಲ ಬಾರಿಗೆ ಎಲ್‌ಟಿಇ ಎಂಬ ಹೊಸ ತಂತ್ರಜ್ಞಾನದಿಂದ 4 ಜಿ ಅನ್ನು ವಿನ್ಯಾಸಗೊಳಿಸಲಾಯಿತು. ಯುನಿವರ್ಸಲ್ ಮೊಬೈಲ್ ಟೆಲಿಕಮ್ಯುನಿಕೇಷನ್ ಸಿಸ್ಟಮ್ (ಯುಎಂಟಿಎಸ್) ಮತ್ತು ಸಿಡಿಎಂಎ 2000 ಸೇರಿದಂತೆ ಪ್ರಮುಕ 3 ಜಿ ತಂತ್ರಜ್ಞಾನಗಳಿಗೆ 4 ಜಿ ವಲಸೆ ಮಾರ್ಗವಾಗಿದೆ. ಮತ್ತೊಂದು ತಂತ್ರಜ್ಞಾನ ವೈಮ್ಯಾಕ್ಸ್ ಸಹ 4 ಜಿ ಅಪ್‌ಗ್ರೇಡ್ ಮಾರ್ಗವನ್ನು ಒದಗಿಸತ್ತದೆ. ಆದರೆ ಎಲ್‌ಟಿಇ 4 ಜಿ ನಿಯೋಜನೆಗಾಗಿ ವಿಶ್ವಾದ್ಯಂತ ಬಳಸುವ ಪ್ರಾಥಮಿಕ ತಂತ್ರಜ್ಞಾನವಾಗಿದೆ. ಹಿಂದಿನ 3 ಜಿ ತಂತ್ರಜ್ಞಾನಗಳಿಗಿಂತ ಎಲ್‌ಟಿಇ ಹೆಚ್ಚು ಪರಿಣಾಮಕಾರಿಯಾಗಿದೆ ಮತ್ತು ಇದು ಡೇಟಾ ವರ್ಗಾವಣೆಯಲ್ಲಿ ಬಹಳಷ್ಟು ಸುಧಾರಣೆಯನ್ನು ಮಾಡಿದೆ. ಎಲ್‌ಟಿಇ ಪ್ರಾರಂಭವಾದ ನಂತರ ಎಲ್‌ಟಿಇ ಅಡ್ವಾನ್ಸ್ (ಎಲ್‌ಟಿಇ–ಎ) ಮತ್ತು ಎಲ್‌ಟಿಇ ಪ್ರೊ ರೂಪದಲ್ಲಿ ಪರಿಚಯಿಸಲಾಯಿತು. ಎಲ್‌ಟಿಇ ಡೌನ್‌ಲಿಂಕ್‌ನಲ್ಲಿ ಗರಿಷ್ಠ 300 ಎಮ್‌ಬಿಪಿಎಸ್ ವೇಗವನ್ನು ಬೆಂಬಲಿಸಬಲ್ಲದು. ಎಲ್‌ಟಿಇ–ಎ ಮತ್ತು ಎಲ್‌ಟಿಇ ಪ್ರೊ ಕ್ರಮವಾಗಿ 1 ಜಿಬಿಪಿಎಸ್ ಮತ್ತು 3 ಜಿಬಿಪಿಎಸ್ ವೇಗವನ್ನು ಬೆಂಬಲಿಸುತ್ತದೆ.

5 ಜಿ ಎಂದರೆ ಐದನೇ ತಲೆಮಾರಿನ ಮೊಬೈಲ್ ನೆಟ್‌ವರ್ಕ್‌ಗಳು. 2020 ಅಲ್ಲಿ ಪರಿಚಯಿಸಿದ ಇದು ನ್ಯೂ ರೇಡಿಯೋ ಅಥವಾ ಎನ್‌ಆರ್ ಎಂಬ ತಂತ್ರಜ್ಞಾನವನ್ನು ಬಳಸುತ್ತದೆ. 5 ಜಿ. ಹಿಂದಿನ ಮೊಬೈಲ್ ತಂತ್ರಜ್ಞಾನಗಳಿಗಿಂತ ಮೂಲಭೂತವಾಗಿ ಭಿನ್ನವಾಗಿದೆ ಮತ್ತು ಬ್ರಾಡ್ ಬ್ಯಾಂಡ್ ಇಂಟರ್ನೆಟ್ ಸೇವೆಗಿಂತ ಹೆಚ್ಚಿನದ್ದಾಗಿದೆ. ಇದರ ಬಹುಪಾಲು ಬಳಕೆಯ ಪ್ರಕರಣಗಳು ಬಹಳ ಇನ್ನೂ ಬರಬೇಕಿದೆ. 5 ಜಿ ತಂತ್ರಜ್ಞಾನವು ಅನೇಕ ಕೈಗಾರಿಕೆಗಳನ್ನು ಡಿಜಿಟಲೀಕರಣಗೊಳಿಸಲು ಸಹಾಯ ಮಾಡುವ ಹೆಚ್ಚಿನ ಸಂಖ್ಯೆಯ ಸಾಧನಗಳನ್ನು ಬೆಂಬಲಿಸುವ ಸಾಮರ್ಥ್ಯ ಹೊಂದಿದೆ. 5 ಜಿ ಗಾಗಿ ಹೆಚ್ಚಿನ ಆವರ್ತನ ಬ್ಯಾಂಡ್‌ಗಳು ಸೀಮಿತ ವ್ಯಾಪ್ತಿಯನ್ನು ಹೊಂದಿವೆ. ಆದರೆ ಕಡಿಮೆ ಸಮಯದ ಸುಪ್ತತೆ (1 ಮಿಲಿಸೆಕೆಂಡಿಗಿಂತ ಕಡಿಮೆ) ಇದು ನೈಜ ಸಮಯದ ಸೇವೆಗಳಿಗೆ ಸೂಕ್ತವಾಗಿದೆ.

ಡೇಟಾ ದರಗಳ ಪ್ರಕಾರ 5 ಜಿ ಡೌನ್‌ಲಿಂಕ್‌ನಲ್ಲಿ 10 ಜಿಬಿಪಿಎಸ್‌ಗಿಂತ ಹೆಚ್ಚಿನ ವೇಗವನ್ನು 1 ಮಿಲಿ ಸೆಕೆಂಡುಗಳಷ್ಟು ಕಡಿಮೆ ಅವಧಿಯಲ್ಲಿ ನೀಡುತ್ತದೆ. ಪ್ರಸ್ತುತ ಸಮಯದಲ್ಲಿ 4 ಜಿ ಪೋನ್‌ಗಳಿಗಿಂತ 5 ಜಿ ಫೋನ್‌ಗಳು ಹೆಚ್ಚು ದುಬಾರಿಯಾಗಿದೆ.

**ಸಂಗ್ರಹ: ರೊ. ಎಂ. ಎನ್. ಎಸ್.ಮಣಿ**

## 50 Things Every Rotarian Should Know About Rotary- Rotary Information

**31 - INTERNATIONAL CONVENTIONS**

Each May or June, Rotary International holds a worldwide convention "to stimulate, inspire and inform all Rotarians at an international level." The convention, which may not be held in the same country for more than two consecutive years, is the annual meeting to conduct the business of the association. The planning process usually begins about four or five years in advance.

The RI board determines a general location and invites cities to make proposals. The conventions are truly international events which 20,000 to 40,000 Rotarians and guests attend. All members should plan to participate in a Rotary International convention to discover the real internationality of Rotary. It is an experience you'll never forget.

**32 - RECREATIONAL AND VOCATIONAL FELLOWSHIPS**

From stamp collecting to wine appreciation, the hobbies of Rotarians are as diverse as the membership itself. Yet, among the more than one million Rotarians worldwide, an amateur-radio enthusiast or a chess player is bound to find others who share the same passions. But Recreational Fellowship members share more than just their common interest in sport diving or Esperanto; they share an interest in fellowship and service and in promoting world understanding. As such, it's no wonder that the International Skiing Fellowship of Rotarians donates the profits from ski events to The Rotary Foundation or that the Flying Rotarians help ferry medical personnel and supplies.

### ರೋಟರಿ ಮಾಹಿತಿ–ರೊ.ವೈ.ಜಿ.ಗುಪ್ತರವರಿಂದ


* ಏಪ್ರಿಲ್ 8 ಮತ್ತು 10, 2024 ರಂದು ರೋಟರಿ ಪ್ರಧಾನ ಕಚೇರಿಯಿರುವ ಇವಾನ್ಸ್‌ಟನ್, ಇಲ್ಲಿ ನಾಯ್ಸ್ ಯು.ಎಸ್.ಎ. ಇಲ್ಲಿ ಅಂತರ ರಾಷ್ಟ್ರೀಯ ರೋಟರಿಯ ಕಾರ್ಯಕಾರಿ ಸಮಿತಿಯವರು ಸಭೆ ಸೇರಿ ಈ ಕೆಳಗಿನ ನಿರ್ಧಾರಗಳು ರೋಟರಿ ಕ್ಲಬ್‌ಗಳಿಗೆ ಅನುಕೂಲ ಎಂದು ತೀರ್ಮಾನಿಸಲಾಯಿತು. ಮಂಡಳಿಯು 3 ವರ್ಷಗಳ ರೂಲಿಂಗ್ ಗುರಿಗಳನ್ನು ಹೊಂದಿಸಲು ಕ್ಲಬ್‌ಗಳನ್ನು ಬಲವಾಗಿ ಪ್ರೋತ್ಸಾಹಿಸುತ್ತದೆ ಮತ್ತು ಕ್ಲಬ್‌ಗಳು ತಮ್ಮ ಗುರಿಗಳನ್ನು ತಲುಪಲು ಸಹಾಯ ಮಾಡಲು 3 ವರ್ಷಗಳ ರೂಲಿಂಗ್ ಪ್ರಾದೇಶಿಕ ಯೋಜನೆಗಳನ್ನು ಅಭಿವೃದ್ಧಿಪಡಿಸಲು ವಲಯಗಳು ಮತ್ತು ಜಿಲ್ಲೆಗಳು ಪ್ರಯತ್ನಿಸಬಹುದೆಂದು ತೀರ್ಮಾನಿಸಿದರು.

* ರೋಟರಿ ಕ್ಲಬ್, ಡೆಲ್ಲಿ ಇದರ ಅಧ್ಯಕ್ಷರಾದ ರೊ. ಸುಧಾನ್‌ಸು ಮತ್ತು ರೈತರ ಜೊತೆಗೂಡಿ ರಾಜಾಸ್ಥಾನ ರಾಜ್ಯದ ಆಳ್‌ವಾರ್ ಹಳ್ಳಿಯ ಹತ್ತಿರ ಚೆಕ್ ಡ್ಯಾಂ ನಿರ್ಮಿಸಿರುತ್ತಾರೆ. ಇದರಿಂದ ರಾಜಾಸ್ಥಾನ್‌ದಲ್ಲಿ ಬೋರ್‌ವೆಲ್ ಮತ್ತು ಭಾವಿಗಳ ನೀರಿನ ಮಟ್ಟ ಜಾಸ್ತಿಯಾಗಿದೆ.

### ಮುಕ್ತಕಗಳ ಮಾಲೆ–ಜೀವನ ನೀತಿ ಅರುಹಲು

ನೀತಿಯೊಳಗಡಗಿರದ, ಬಾಳಗೇಳಗೆಯಿರದು
ರೀತಿಯರಿಯುತಲಿದನು ಉಳಿಸಿ ಬೆಳೆಸುತಿರು
ಸೋತು ಸರಿಯದೆ ಸಾಗು ಸಾಧನೆಯ ಹಾದಿಯಲಿ
ಸೇತುವಿದುಯಶದೆಡೆಗೆ – ಪದುಮನಾಭ

### ಮುದ್ದುರಾಮನ ಪದಗಳು



ಹೋಗದಿರು ಕಣ್ಮುಚ್ಚಿ ಅನುಸರಿಸಿ ಪಂಥಗಳ.
ತೆರೆದೆದೆಯಲಿದೆ ಸತತ ಚಿಂತನೆಯ ಮಿಂಚು
ಕುಳಿತು ಪರನಾವೆಯಲಿ ಹುಟ್ಟು ಹಾಕುವೆ ಎಂತು
ನಿನಗೆ ನೀನೇ ದಾರಿ – ಮುದ್ದುರಾಮ

*(ಸಂಗ್ರಹ : ಜಿ. ಸತ್ಯನಾರಾಯಣ)*

### ಕಗ್ಗದ ಪರಿಮಳ ನಿಮಗಾಗಿ

ಬೆದಕಾಟ ಬದುಕೆಲ್ಲಾ ಚಣಚಣವು ಹೊಸ ಹಸಿವು
ಅದಕಾಗಿ ಇದಕಾಗಿ ಮತ್ತೊಂದಕಾಗಿ
ಅಧಿಕಾರ ಸಿರಿ ಸೊಗಸು ಕೀರ್ತಿಗಳ ನೆನೆದು ಮನ
ಕುದಿಯುತಿಹುದಾವಗಂ – ಮಂಕುತಿಮ್ಮ

ಈ ಬದುಕೆಲ್ಲಾ ಹುಡುಕಾಟದಲ್ಲಿ ಕಳೆದುಹೋಗುತ್ತದೆ. ಅದಕ್ಕಾಗಿ, ಇದಕ್ಕಾಗಿ, ಮತ್ತೊಂದನ್ನು ಪಡೆಯುವುದಕ್ಕಾಗಿ, ಕ್ಷಣಕ್ಷಣವೂ ಹಸಿವುಂಟಾಗುತ್ತಲೇ ಇರುತ್ತದೆ. ಅಧಿಕಾರ, ಸಂಪತ್ತು, ಸೌಂದರ್ಯ, ಕೀರ್ತಿ ಇವುಗಳನ್ನು ನೆನಯುತ್ತಾ ಮನಸ್ಸು ಯಾವಾಗಲೂ ಕುದಿಯುತ್ತಲೇ ಇರುತ್ತದೆ.

ನಮ್ಮ ಜೀವನವೆಲ್ಲಾ ಹುಡುಕಾಟದಲ್ಲೇ ಮುಗಿದು ಹೋಗುತ್ತದೆ. ಯಾವ ವಸ್ತುವಿನಲ್ಲಿಯೂ ನರನ ಮನಸ್ಸು ನೆಲೆಯಾಗಿ ನಿಲ್ಲುವುದಿಲ್ಲ. ಕೆಲವೊಮ್ಮೆ ಯಾವುದನ್ನು ಹುಡುಕುತ್ತವೆಯುಂಬುದು ನಮ್ಮ ಅರಿವಿಗಿರುವುದಿಲ್ಲ. ಅದನ್ನು ಯಾಕಾಗಿ ಹುಡುಕುತ್ತೇವೆ ಎಂಬುದು ಗೊತ್ತಿರುವುದಿಲ್ಲ. ಕ್ಷಣಕ್ಷಣಕ್ಕೂ ಮಾನವನನ್ನು ಹೊಸ ಹೊಸ ಹಸಿವುಗಳು ಕಾಡುತ್ತಾ ಹೋಗುತ್ತವೆ. ಅದಾದ ಮೇಲೆ ಇದು, ಇದಾದ ಮೇಲೆ ಮತ್ತೊಂದು. ಮನುಷ್ಯನ ಮನಸ್ಸು ಅಧಿಕಾರ, ಸಂಪತ್ತು, ಸೌಂದರ್ಯ ಕೀರ್ತಿಗಳನ್ನು ನೆನೆಯುತ್ತಾ ಕುದಿಯುತ್ತಲೇ ಇರುತ್ತದೆ. ಒಂದು ಅಧಿಕಾರ ಸಿಕ್ಕರೆ ಅದರಲ್ಲಿಯೇ ಅವನು ತೃಪ್ತಿ ಹೊಂದುವುದಿಲ್ಲ. ಅದಕ್ಕಿಂತ ಹೆಚ್ಚಿನ ಅಧಿಕಾರಕ್ಕಾಗಿ ಹೆಣಗಾಡುತ್ತಾನೆ. ಒಂದು ಸಂಪತ್ತು ಬಂದ ಮೇಲೆ ಇನ್ನೊಂದು ಸಂಪತ್ತನ್ನು ಪಡೆಯಲು ಕಾತರನಾಗುತ್ತಾನೆ. ಈಗ ಒಂದು ಸುಂದರವೆನೆಸಿದರೆ, ಇನ್ನೊಮ್ಮೆ ಇನ್ನೊಂದು ಸುಂದರವಾಗಿ ಕಾಣತೊಡಗುತ್ತದೆ. ಒಂದು ಸಲ ಕೀರ್ತಿಯನ್ನು ಪಡೆದ ಮೇಲೆ ಅದಕ್ಕಿಂತ ಹೆಚ್ಚಿನ ಕೀರ್ತಿಗಾಗಿ ಹವಣಿಸುತ್ತಾನೆ. ಹಾಗಾದರೆ ಅವನು ಒಂದುಕಡೆ ನೆಲೆ ನಿಲ್ಲುವುದು ಯಾವಾಗ?

### ಚಿಂತನ

ಜೀವನದಲ್ಲಿ ನಾವು ಗೆಲ್ಲುವುದು ಸಾಧನೆ. ಆದರೆ ಮತ್ತೊಬ್ಬರನ್ನು ಗೆಲ್ಲಿಸುವುದು ಮಹಾಸಾಧನೆ. ಸೋತಿರುವವರನ್ನು, ಕಷ್ಟದಲ್ಲಿರುವವರನ್ನು ಗುರುತಿಸಿ, ಅವರ ಸಮಸ್ಯೆಗೆ ಸ್ಪಂದಿಸಿ, ನೆರವು ನೀಡುವ ಪ್ರವೃತ್ತಿ ಸೇವಾ ಮನೋಭಾವ ಹೊಂದಿರುವ ಪ್ರತಿಯೊಬ್ಬರಲ್ಲಿಯೂ ಇರುತ್ತದೆ. ಹಾಗಾದಾಗ ಮಾತ್ರ ಸಾಮಾಜಿಕ ಪ್ರಗತಿ ಸಾಧ್ಯ. ಸಾಮಾಜಿಕ ಪ್ರಗತಿಯಿಂದಲೇ ದೇಶದ ಪ್ರಗತಿ ಸಾಧ್ಯ

– ರೊ. ಎನ್.ಜಿ. ಉಷಾ

To,

*Book Post*